


ಭೇಟಿ ಕಷ್ಟವಿತ್ತು, ಕತ್ತಲು, ಕಿಟಕಿ, ಬೆಳದಿಂಗಳು, ರಸ್ತೆಯ ಕೊನೆ ಹೀಗೆ ಏನೇನೋ ಬರೆದಿದ್ದೆ. ಅದು ಹಾಗಲ್ಲವಂತೆ, ಇದನ್ನ ಹೇಳಲಿಕ್ಕೆ ಅಂತ ಬಂದಳಂತೆ, ಹೇಳಿ ಸರಿಪಡಿಸಲಿಕ್ಕೆ! ಹಾಳಾದವಳು.. ಕತ್ತೆ ಲೌಡಿ.. ಹೋಗುವ ಮುನ್ನ ಏನಂದಳು..?

ಹಿಪೊಕ್ರಿಟ್.

ಅಂದಹಾಗೆ ಅವಳು ಎಷ್ಟು ಸಲ ಹಿಪೊಕ್ರಿಟ್ ಅಂದಳು...

ಮೂರು ಸಲ?

ಮ್... ಮೂರುಸಲ, ಮೊದಲು ಏನಕ್ಕಂದಳು... ಏನಕ್ಕೋ ಅಂದಳು. ಆಮೇಲೆ ಅದೇನದು ಅವಾರ್ಡ್ ಬಗ್ಗೆ ಕೇಳಿದಳು ಅನ್ಸತ್ತೆ...

ಮ್... ಅದೇ. ನಾನೇನಂದೆ.. ಅವಾರ್ಡ್‌ಗಳ ಬಗ್ಗೆ ನಾನು ತಲೆಕೆಡಿಸಕೊಳ್ಳಲ್ಲ ಅಂದೆ. ನನ್ನ ಕಥೆಗಳ ಬಗೆಗಿನ ಹೊಗಳಿಕೆಯನ್ನಾಗ್ಲಿ, ಅವಾರ್ಡುಗಳನ್ನಾಗಲೀ ನಾನು ಮನಸ್ಸಿಗೆ ಹಾಕೊಳ್ಳಲ್ಲ, ಅವಾರ್ಡು ಬಂದಿದ್ದರೆ ಅದು ಕಥೆಗೆ, ನಂಗಲ್ಲ ಅದೇ ನಿಜ ಅಂದೆ...

ಹಾಗಿದ್ರೆ ಮತ್ತೆ ಈಗ ನಿಮ್ಮ ಕಥೆಗಳ ಬಗ್ಗೆ ನಾನು ನೆಗೆಟಿವ್ ಮಾತಾಡ್ತಾ ಇದ್ರೆ ಇಷ್ಟೇಕೆ ಕೋಪ ಬರ್ಬೇಕು, ಹೊಗಳಿಕೆನಾ ತಗೊಳ್ಳಲಿಲ್ಲಾಂದ್ಮೇಲೆ ತೆಗಳಿಕೇನೂ ತಗೋಬಾರ್ದಲ್ವಾ, ಇಟ್ಸ್ ಲೈಕ್ ಪೆಂಡುಲಂ, ಹೊಗಳಿಕೆ ಎಷ್ಟು ದೂರ ಚಲಿಸುತ್ತೋ, ಅಷ್ಟೇ ದೂರ ತೆಗಳಿಕೆಗೂ ಚಲಿಸತ್ತೆ ಮನಸು, ಡೋಂಟ್ ಡಿನೇ ಇಟ್, ಹಿಪೊಕ್ರಿಟ್' ಅಂದಳು'.

ಹಿಪೊಕ್ರಿಟ್ ...

ಶಾಂತಿ ಕೂಡಾ ಹೋಗುವ ಮುನ್ನ ಹಾಗೆಯೇ ಹೇಳಿಹೋದಳು. ಅವಳಿಗೆ ನನ್ನ ಗೆಳತಿಯರ ಬಗ್ಗೆ ಅಸಮಾಧಾನ. ಅವಳಿಗೆ ಇರುವ ಗೆಳೆಯನ ಬಗ್ಗೆ ನನಗೆ ಗೊತ್ತಿದ್ದರೂ ಸುಮ್ಮನಿದ್ದೇನೆಂಬುದರ ಬಗ್ಗೆ ಅಸಮಾಧಾನ. ಎಲ್ಲಿ ಅವಳ ಅಪಾರ ಆಸ್ತಿಯಿಂದ ನಾನು ಹೊರಗಾಗಬೇಕಾಗಬಹುದೋ ಎಂಬ ತಳಮಳದಿಂದ ಅವಳ ಗೆಳೆಯನ ಕುರಿತು ಗೊತ್ತಿದ್ದೂ ಸುಮ್ಮನಿದ್ದೇನೆಂಬ ತಕರಾರು. ಬಹುಶಃ ಅವಳು ನನ್ನ ಮೇಲಿನ ಸಿಟ್ಟಿನಿಂದ ಗೆಳೆಯನನ್ನು ಹೊಂಚಿಕೊಂಡಳೋ ಅದು ನನಗೆ ತಿಳಿಯದು. ಆದರೆ ನನ್ನ ಹಂಚಿಕೆ ಇದ್ದದ್ದು ಇಷ್ಟೇ ನನ್ನ ಬದುಕಿನ ನಡೆಯನ್ನು ಬದಲಿಸಿಕೊಳ್ಳಲು ನನ್ನಿಂದಾಗುತ್ತಿರಲಿಲ್ಲ. ನಾವಿಬ್ಬರೂ ಒಂದೇ ಮಂಚದಲ್ಲಿ ಅಪರಿಚಿತರಂತೆ ಮಲಗುತ್ತ, ಹೊರ ಜಗತ್ತಿಗೆ ಅನ್ಯೋನ್ಯತೆ ನಟಿಸುತ್ತ ಬದುಕಿದ್ದೆವು, ಇಲ್ಲಿಲ್ಲ, ನಾವು ನಮ್ಮದೇ ದೇಹಗಳಿಗೆ ವಿಪರೀತ ಪರಿಚಿತರಾಗಿಬಿಟ್ಟಿದ್ದೆವು, ಹೀಗೆ ಹೇಳುವುದೇ ಸರಿ. ಹೊಸ ಬೆರಗೊಂದನು ಹುಟ್ಟಿಸಿಕೊಳ್ಳದ ಹೊರತು ನಮಗೆ ಬಿಡುಗಡೆ ಇರಲಿಲ್ಲ. ಆದರೆ ನಮ್ಮ ನಡುವೆ ಬೆರಗು ಹುಟ್ಟುವ ಕಾಲವೇ ಮುಗಿದುಹೋಗಿದೆಯೇನೋ ಎಂಬಂತೆ, ಯಾವ ಪೋರ್ಸಿಗೆ ಎಷ್ಟು ಮುಲುಕು ಎಂಬುವುದರ ತನಕ ಎಲ್ಲವೂ ತಿಳಿದುಹೋಗಿತ್ತು. ಹೇಗೆ ಪ್ರಯತ್ನಿಸಿದರೂ ದೇಹದಲ್ಲಿ ಕಾವು ಹುಟ್ಟುತ್ತಿರಲಿಲ್ಲ, ಮುತ್ತಿನಲ್ಲಿ ಸವಿಯಿರಲಿಲ್ಲ, ನಾಲಗೆಯಂಚು ಮೊಡ್ಡಾದ ಹಾಗೆ, ಇಲ್ಲ ತುಟಿಗಳು ರಸಹೀನವಾದ ಹಾಗೆ. ದೇಹಗಳು ಪರಿಚಿತವಾದಷ್ಟೂ ಆಸೆ ಆವೇಗ ಕಳೆದು ಹೋಗಿಬಿಡುತ್ತದೆಯೆಂಬುವುದು ನಿರಾಕರಿಸಲಾರದ ಸತ್ಯ. ತಣ್ಣನೆಯ ಪ್ರೇಮ, ನಂಬಿಕೆ, ನಿರಾಳತೆ, ಕ್ಷೇಮಭಾವ... ಏನೆಲ್ಲ ಹೆಸರಿಟ್ಟು ಸಂಬಂಧವನ್ನು ನವೀಕರಿಸಿ ನೋಡಿದರೂ ಆವೇಗವೆಂಬುವುದು ಇಲ್ಲವಾಗಿದೆ. ಮತ್ತು ಈ ಮೇಲಿನ ಯಾವ ಹೆಸರಿನಿಂದ, ಭಾವದಿಂದ ಕರೆದರೂ ಅದು ಯಾವ ಬಿಸುಪನ್ನೂ ಹುಟ್ಟುಹಾಕಲಾರದು ಎಂಬುವುದೂ ಸತ್ಯ.